
# ಸರೋವರಗಳ ನಗರ — ಉದಯಪುರ

ಚಿತ್ರಲೇಖನ: ನಾ. ದೇಸಾಯಿ.





ಕಪ್ಪು-ಬಿಳಿ ಚಿತ್ರಗಳಿಗೆ ಸಹಾಯ :
ಸುರೇಶ್, ಎಸ್. ಬಂಗೇರಾ

# ಸರೋವರಗಳ ನಗರ ಉದಯಪುರ


ರಾಜಸ್ತಾನ ಕ್ಷಾತ್ರಕ್ಕೆ, ನಿಷ್ಠೆಗೆ, ಆತ್ಮಗೌರವಕ್ಕೆ ಚರಿತ್ರೆಯಲ್ಲಿ ಇನ್ನೊಂದು ಹೆಸರಾಗಿ ಪ್ರತಿಷ್ಠಿತವಾಗಿರುವಂತೆಯೆ ಅರಮನೆಗಳು, ಹಾಲುಗಲ್ಲಿನ ಭವ್ಯ ಸೌಧಗಳು, ಸರೋವರೋದ್ಯಾನಗಳು, ಕರಕುಶಲ ವಸ್ತುಗಳಿಗೂ ಪ್ರಸಿದ್ಧ. . . .

1. ಮೋರ್‌ಚೌಕದ ಮಯೂರ.

2. ಸಹೆಲೋಂಕಿ ಬಾರಿ ಲೇಕ್ ಪ್ಯಾಲೇಸ್ ಹೋಟೆಲ್

3. ಶ್ವೇತನಗರ – ಉದಯಪುರ. ರಾಜಮಹಲ್‌ನಿಂದ ಕಾಣುವ ಪಕ್ಷಿನೋಟ.

3.





# ಸರೋವರಗಳ ನಗರ ಉದಯಪುರ

'ರಾಜಸ್ಥಾನ' ಎಂದು ಆ ನಾಡಿಗೆ ಹೆಸರು; ಕಾರಣ, ಅದು ರಾಜರ ಸ್ಥಾನವಾಗಿದ್ದುದು (ರಾಜಪುತಾನ ಎಂದೂ ಕರೆದುದುಂಟು.) ಈ ನಾಡಿನ ಇತಿಹಾಸದ ಪುಟಗಳನ್ನು ತಿರುವಿ ಹಾಕಿದಾಗ, ಇಲ್ಲಿಯ ಪುರುಷರು ಎಂತಹ ಶೂರರು, ಧೀರರು, ರಾಜ್ಯ ಉಳಿಸುವಲ್ಲಿ, ರಾಜರನ್ನು ಕಾಪಾಡುವಲ್ಲಿ – ಅವರ ತ್ಯಾಗ, ಅವರ ರಾಜಭಕ್ತಿಯನ್ನು ಕಂಡಾಗ ಮೈನವಿರೇಳುತ್ತದೆ. ಇಲ್ಲಿಯ ಮಹಿಳೆಯರೂ ಏನು ಕಡಿಮೆಯವರಲ್ಲ, ಪುರುಷರಿಗೆ ಸರಿಸಮಾನವಾಗಿಯೇ ಸಮರಭೂಮಿಗೆ ಇಳಿದುದನ್ನು ಕಾಣುತ್ತೇವೆ. ಮರ್ಯಾದೆಗೆ ಕುಂದು ಬರುವದೆಂಬ ಶಂಕೆ ಬಂದರೆ ಈ ಮಹಿಳೆಯರು ಮರಣವನ್ನಪ್ಪಿಯಾರೆಯೇ ವಿನಾ ಮಾನಕ್ಕೆ ಕುಂದು ತಂದುಕೊಳ್ಳಲಾರರು. ಎಂತಲೇ ಇಲ್ಲಿ ನಡೆದ "ಜೋಹರ್" (ಸಾಮೂಹಿಕ ಚಿತಾರೋಹಣ) ಗಳು ಜಗತ್ಪ್ರಸಿದ್ಧವಾಗಿವೆ!

ಉದಯಪುರ ಇರುವದು ಈ ನಾಡಿನಲ್ಲಿಯೇ. ಸರೋವರಗಳ ನಗರವೆಂದು, ವಿಶ್ವವಿಖ್ಯಾತವಾಗಿರುವದು. ಇಂದು ಈ ನಗರಕ್ಕೆ ನಾವು ಹೋಗುವದು ಹೆಚ್ಚಾಗಿ 'ಪ್ರವಾಸಿಗ' ಎಂದು. ಅಲ್ಲಿ ಝಗಝಗಿಸುವ ಅರಮನೆಗಳು, ಹಾಲುಗಲ್ಲಿನಲ್ಲಿ ಬೆಳಗುವ ಮಂದಿರಗಳು, ಗುಡಿಗುಂಡಾರಗಳು, ಅಚ್ಚ ನೀಲಿಯ ರತ್ನಗಂಬಳಿಯನ್ನೇ ಈ ನಗರ ಸುತ್ತಲೂ ಹಾಸಿರುವರೋ – ಎಂದು ಭಾಸವಾಗುವ ಸರೋವರಗಳು, ಉದ್ಯಾನಗಳು, ಪುಟಿಪುಟಿದು ನೀರು ಚಿಮ್ಮುವ ಕಾರಂಜಿಗಳು, ಹಾಗೂ ಅಲ್ಲಿಯ ಸ್ಥಳೀಯ ಜನ, ಅವರಿಂದ ಸಿದ್ಧವಾದ ಕರಕುಶಲ ವಸ್ತುಗಳು – ಅವುಗಳನ್ನು ಮಾರಾಟ ಮಾಡುವ ಅಂಗಡಿಗಳು – ಇವೇ ನಮ್ಮೆದುರು ನಿಲ್ಲುವ ದೃಶ್ಯಗಳು; ಇಂದಿನ ಉದಯಪುರದ ನೋಟಗಳು. ಆದರೆ "ಉದಯಪುರ" ಹುಟ್ಟಿದ್ದೂ, ಬೆಳೆದದ್ದೂ ಒಂದು ಕತೆಯೇ.

* * *

4. ಸೆಹೆಲೋಂಕಿ ಬಾರಿಯಲ್ಲಿ ಹಬ್ಬದ ಗೌಜಿಯನ್ನು ನೋಡಿ ಸಂಭ್ರಮಿಸಲು ರಾಣೀವಾಸದವರು ಕೂರುತ್ತಿದ್ದ ಕಮಾನು.

5. ಸೆಹೆಲೋಂಕಿ ಬಾರಿ – ಸ್ನೇಹಿತೆಯರ ಉದ್ಯಾನದ ಒಂದು ಕಾರಂಜಿ.

4.



5.



# ಸರೋವರಗಳ ನಗರ ಉದಯಪುರ



6. ರಾಜಮಹಲ್

7. ರಾಜಮಹಲ್


ಈ ನಾಡನ್ನು ಆಳಿದವರು, 'ಮೇವಾರ' ರಾಜರು. ಚಿತ್ತೋರನ್ನು ರಾಜಧಾನಿಯಾಗಿ ಮಾಡಿಕೊಂಡು ರಾಜ್ಯವಾಳುತ್ತಿದ್ದರು. ಆದರೆ ಅವರಿಗೆ ಅಲ್ಲಿ ವೈರಿಗಳ ಕಾಟ ಹೆಚ್ಚಾಯಿತು, ಹೆಚ್ಚಾಗಿ ಮೊಗಲರ ತೊಂದರೆ ಬಹಳವಾಯಿತು. ಈ ಕಾರಣದಿಂದಾಗಿ ರಾಜಧಾನಿಯ ಸ್ಥಳವನ್ನು ಬದಲಾಯಿಸಲೇಬೇಕೆಂಬ ವಿಚಾರ ದಿನದಿನಕ್ಕೆ ಹೆಚ್ಚಾಗತೊಡಗಿತು – ಅನಿವಾರ್ಯವಾಗತೊಡಗಿತು.

ಮಹಾರಾಣಾ ಉದಯಸಿಂಹನು ತನ್ನ ಕುಲದೇವತೆ – 'ಏಕಲಿಂಗಜೀ'ಯಲ್ಲಿ ಪ್ರಾರ್ಥನೆಗೆ ಹೋದ ಸಮಯದಲ್ಲೇ ಬೇಟೆಗೂ ಹೊರಡುತ್ತಾನೆ. ತಿರುಗುತ್ತಾ 'ಅಹರ' ಎಂಬ ಹಳ್ಳಿಯ ಹತ್ತಿರಕ್ಕೆ ಬಂದಾಗ, ಈ ಸ್ಥಳದ ಬಗ್ಗೆ ಒಂದು ಆಕರ್ಷಣೆ ಹುಟ್ಟುತ್ತದೆ. ಸುತ್ತಲೂ ಕಣ್ಣು ಹೊರಳಿಸಿದಾಗ, ಮುಕ್ಕೆಲದಲ್ಲೂ 'ಅರಾವಳೀ' ಪರ್ವತಗಳ ಸಾಲು, ಇತ್ತ ಸರೋವರ. ನೀರಿನ ತೊಂದರೆಯಿಲ್ಲ. ಸುರಕ್ಷಿತತೆ ದೃಷ್ಟಿಯಿಂದ ಈ ಜಾಗೆ 'ರಾಜಧಾನಿ'ಗೆ ಉತ್ತಮವೆಂಬ ವಿಚಾರ ಮನದಲ್ಲಿ ಮಿಂಚುತ್ತದೆ. ತನ್ನ ಅನಿಸಿಕೆಯನ್ನು ತನ್ನ ಸೈನ್ಯಾಧಿಕಾರಿಗಳಿಗೂ ತಿಳಿಸುತ್ತಾನೆ.

ಇದೇ ಸಮಯದಲ್ಲೇ ಮತ್ತೊಮ್ಮೆ ಮಹಾರಾಣಾ ಉದಯಸಿಂಹನು, ಒಂದು ಮೊಲದ ಬೆನ್ನಟ್ಟಿ ಹೋದಾಗ, ಅವನಿಗೆ ಅನುಷ್ಠಾನದಲ್ಲಿ ಮಗ್ನನಾದ ಸಾಧುವಿನ ದರ್ಶನವಾಗುತ್ತದೆ. ರಾಣಾನಿಗೆ ಸಾಧುವನ್ನು ನೋಡಿ, ಭಕ್ತಿ ಉದಯಿಸಿ ನೇರ ಅವನ ಬಳಿ ಹೋಗಿ 'ಕಾಲಿಗೆರಗುತ್ತಾನೆ'. ಇವನೊಬ್ಬ ರಾಜನೆಂದು ತಿಳಿದ ಸಾಧುವು – ಉದಯಸಿಂಹನಿಗೆ – 'ನೀನು ನಿನ್ನ ರಾಜಧಾನಿಯನ್ನು ಇಲ್ಲೇ ನಿರ್ಮಿಸಿದರೆ ಸೋಲನ್ನೆಂದೂ ಅರಿಯಲಾರೆ. ಈ ಜಾಗೆಯನ್ನು ಯಾವ ವೈರಿಯೂ ನಿನ್ನಿಂದ ಕಿತ್ತುಕೊಳ್ಳಲು ಸಮರ್ಥನಾಗಲಾರ' ಎಂದು ಆಶೀರ್ವದಿಸುತ್ತಾನೆ.

ಸಾಧುವಿನ ಈ ಮಾತನ್ನು ಕೇಳಿದ ಮಹಾರಾಣಾ ಉದಯಸಿಂಹನು ನೆರೆಯಲ್ಲೇ ಇದ್ದ "ಪಿಛೋಲಾ" (pichola) ಸರೋವರದ ಬಳಿ ರಾಜಧಾನಿಯನ್ನು ಕಟ್ಟಲು ನಿರ್ಧರಿಸಿ ಇಂದು ಜಗತ್ಪ್ರಸಿದ್ಧವಾಗಿರುವ ಅರಮನೆಯ ಶಂಕುಸ್ಥಾಪನೆ ಮಾಡುತ್ತಾನೆ (ಕ್ರಿ.ಶ. 1559.) ಸಾಧುವು ಹೇಳಿದಂತೆ ಈ ರಾಜಮನೆತನ

6.



ದವರು ಯಾರಿಗೂ ಸೋಲಲಿಲ್ಲ: ಉದಯಸಿಂಹನಿಂದ ಹಿಡಿದು (1532) ಭಾರತವು ಸ್ವತಂತ್ರವಾಗುವವರೆಗೆ. ಕೊನೆಯ ಮಹಾರಾಣಾ ಭೋಪಾಲಸಿಂಹರೇ 1947ರಲ್ಲಿ ಸ್ವತಂತ್ರ ಭಾರತದ ಆಡಳಿತಕ್ಕೆ ರಾಜ್ಯವನ್ನು ಬಿಟ್ಟುಕೊಟ್ಟಿದ್ದಾರೆ. ಈ ರೀತಿಯಾಗಿ ನಾಲ್ಕು ಶತಮಾನಗಳಲ್ಲಿ 22 ಜನ ರಾಜರು ಈ ನಾಡನ್ನು ಆಳಿದ್ದಾರೆ. ಕೊನೆಯ ರಾಜರಾಗಿದ್ದ ಭೋಪಾಲಸಿಂಹರು ತೀರಿದ್ದು 1955ರಲ್ಲಿ.

ಇಂದು ಜಗತ್ತಿನಲ್ಲಿಯೇ ಒಂದು ಸುಂದರ ನಗರವೆಂದು ಪ್ರಸಿದ್ಧವಾಗಿರುವ ಉದಯಪುರದ ಬೆಳವಣಿಗೆ ಶತಮಾನಗಳ ಕಾಲ ನಡೆದಿದೆ. ಸ್ಥಾಪನೆಯೇನೋ ಉದಯಸಿಂಹರಿಂದ ಆಯಿತು. ಅವರದೇ ಹೆಸರಿನಲ್ಲಿಯೇ ಹುಟ್ಟಿಕೊಂಡಿತು. ಆದರೆ ಬೆಳೆದದ್ದು ಮುಂದಿನ ಕೆಲ ಶತಮಾನಗಳಲ್ಲಿ. ಬೇರೆ ಬೇರೆ ಅರಸರಿಂದ ವಿವಿಧ ಕಟ್ಟಡಗಳು ರೂಪುಗೊಂಡವು.


ಉದಯಸಿಂಹರ ತರುವಾಯ ಪ್ರತಾಪಸಿಂಹರಿಗೆ ಅರಮನೆಯ ಬೆಳವಣಿಗೆ ನಗರ ಸೌಂದರ್ಯಗಳ ಬಗ್ಗೆ ಹೆಚ್ಚು ಆಸ್ಥೆ ವಹಿಸುವದಾಗಲಿಲ್ಲ. ಅಕಬರ ಬಾದಶಹನೊಂದಿಗೆ ಕಾದಾಡುವದರಲ್ಲಿಯೇ ಅವರ ಹೆಚ್ಚು ಸಮಯ ಹೋಯಿತು. ಮುಂದೆ ಅವರ ಮೊಮ್ಮಗ ಕರಣಸಿಂಹ (1620–1628) ಅರಮನೆಯನ್ನು ಬೆಳೆಸುವದಲ್ಲದೇ – ಈ ಊರ ಸುತ್ತಲೂ ಗೋಡೆಯನ್ನು ನಿರ್ಮಿಸಿದರು. ಇವರ ನಂತರದ ಮಹಾರಾಣಾ ಜಗತ್‌ಸಿಂಹರು (1628–1652) ಮೋಹನ ಮಂದಿರ – ಜಗದೀಶ ಮಂದಿರಗಳನ್ನು ನಿರ್ಮಿಸಿದರು.

'ರಾಜಸಮುದ್ರ' ಸರೋವರದ ನಿರ್ಮಾಣವಾದುದು ಮಹಾರಾಣಾ ರಾಜಸಿಂಹರ ಸಮಯದಲ್ಲಿ – (1652–1680). 'ನೌಚಾಕಿ'ಗಳುಂಟು. ಇಲ್ಲಿ ಅತ್ಯಂತ ಹಿರಿಯದಾದ ಶಿಲಾಲೇಖವಿದೆ. ಮುಂದೆ 'ಫತ್ತೇಸಾಗರ' ಸರೋವರವನ್ನು ನಿರ್ಮಿಸಿದವರು ಜಯಸಿಂಹರು. (1680–1698) ನಂತರ ಮಹಾರಾಣಾ ಅಮರಸಿಂಹರು (1698–1710) ಇದ್ದ ಅರಮನೆಯಲ್ಲೇ ಬಡೀಮಹಲ್ ನಿರ್ಮಿಸಿದರು.

### ಸೆಹಲೊಂ–ಕಿ–ಬಾರಿ

ಚಿಕ್ಕ ಕಟ್ಟಡಗಳಿದ್ದ ಚೊಕ್ಕವಾಗಿರುವ ಉದ್ಯಾನ, ಕಾರಂಜಿಗಳಿಂದ ಕೂಡಿದ ಸುಂದರ ಸ್ಥಳ ಇದು. ಕಾರಂಜಿಗಳು ಯಾವಾಗಲೂ ಪುಟಿಯುತ್ತಿರುವದಿಲ್ಲ. ನಾವು ಹೋಗಿ ಅದಕ್ಕಾಗಿ ಐದು ರೂಪಾಯಿ ಕೊಡಬೇಕು. ಇಲ್ಲಿ ಹೋಗುವಾಗ ದರ್ಶಕನನ್ನು (Guide) ಕರೆದುಕೊಂಡು ಹೋಗುವದು ಉತ್ತಮ. ನೀವು ಒಳಸೇರುತ್ತಿರುವಂತೆಯೇ ದಾರಿಯ ಇಕ್ಕೆಲದಲ್ಲಿ ಕಾರಂಜಿ ಪುಟಿಯುತ್ತವೆ. ನೀವು ಮಳೆಯಲ್ಲಿ ನಡೆದ ಭಾಸವಾಗುತ್ತದೆ. ಇದು ಮಹಾರಾಣಾ ಸಂಗ್ರಾಮಸಿಂಹರ ಸಮಯದಲ್ಲಿ ನಿರ್ಮಾಣವಾದುದು (1710–1734). ರಾಜಕುವರಿಯರಿಗೆ ಬೇಸಿಗೆಯಲ್ಲೂ ಮಳೆಯ ಅನುಭವಬೇಕೆಂದು ಇಚ್ಛಿಸಿದ್ದೇ ಈ "ಸೆಹಲೊಂ-ಕಿ-ಬಾರಿ"ಯ ನಿರ್ಮಾಣಕ್ಕೆ ಮೊದಲಾಯಿತು. ಈಗಲೂ ಕಾರಂಜಿಗಳು ಪುಟಿದಾಗ ಮಳೆಯ ಭಾಸ ನಿಮಗೂ ಆಗುತ್ತದೆ. ಆ ಸಪ್ಪಳ, ಆ ವಾತಾವರಣ ಯಾವ ಋತುವಿನಲ್ಲಿದ್ದರೂ ನಿಮ್ಮನ್ನು ಮಳೆಗಾಲಕ್ಕೆ ಕರೆದುಕೊಂಡು ಹೋಗುತ್ತವೆ. ವಿಶಾಲವಾದ ಈ ಸ್ಥಳ –ಅಂದಿನ ರಾಣಿಯರು – ರಾಜಕುವರಿಯರಿಗೆ ವಿಹಾರದ ಸ್ಥಳ, ಆಟದ ಜಾಗೆ, ಹಬ್ಬ- ಹುಣ್ಣಿಮೆಗಳನ್ನು ಆಚರಿಸುವ ತಾಣವೂ ಆಗಿತ್ತು. ಈಗ ಪ್ರವಾಸಿಗರಿಗೆ ನೋಟದ ಜಾಗೆ ಆದರೂ. ಇಲ್ಲಿ ಸಾಮೂಹಿಕವಾಗಿ ನಡೆಯುವ ಕೆಲ ಹಬ್ಬಗಳನ್ನು ಈಗ ಸರಕಾರದ ವತಿಯಿಂದಲೇ ಆಚರಿಸಲಾಗುತ್ತಿದೆ. ಅಂತಹದರಲ್ಲಿ – 'ಗಂಗೌರ'ಹಬ್ಬ. ಇಲ್ಲಿ ಪ್ರತಿವರ್ಷ ನಡೆಯುವದು. ಹೋಳಿಯ ಮರುದಿನ ಪ್ರಾರಂಭವಾದ ಈ ಹಬ್ಬ ಮುಂದಿನ ಹದಿನೈದು ದಿನ ನಡೆಯುತ್ತದೆ. ಮಹಿಳೆಯರು

7.





# ಸರೋವರಗಳ ನಗರ ಉದಯಪುರ

ಇವರ ವೇಳೆಗಾಗಲೇ ನವ್ಯತೆಯು ಕಾಲಿಟ್ಟಿತ್ತು. ಉದಯಪುರವನ್ನು ವಿದ್ಯುದ್ದೀಪದಿಂದ ಬೆಳಗಿಸಿದ ಕೀರ್ತಿ ಇವರಿಗೆ; ನೀರು ಸರಬರಾಜು ಮಾಡಿದ್ದೂ ಇವರೇ.

ಸಜ್ಜನಸಿಂಹರ ನಂತರ ಆಳಿದವರು ಮಹಾರಾಣಾ ಫತೇಸಿಂಹ (1884 – 1930.) ಇವರ ಕಾಲದಲ್ಲಿ ರೈಲು ಈ ರಾಜ್ಯದಲ್ಲಿ ಕಾಣಿಸಿತು. ಉದಯಪುರದಿಂದ ಚಿತ್ತೋರವರೆಗೆ ರೈಲು ಮಾರ್ಗ ನಿರ್ಮಿಸಿದರು. ಆಸ್ಪತ್ರೆ, ಕಾಲೇಜು ಶಾಲೆಗಳು ಅಲ್ಲಲ್ಲಿ ತಲೆದೋರಿದವು. ಇವರ ಕಾಲದಲ್ಲಿ ಭೀಕರ ಬರಗಾಲ 1899ರಲ್ಲಿ, ನಂತರ 1904ರಲ್ಲಿ ಪ್ಲೇಗ್ ರೋಗದ ಹಾವಳಿ. ಅಂಥ ಕಷ್ಟ ಕಾಲದಲ್ಲಿ ಪ್ರಜೆಗಳಿಗೆ ಇವರು ಸಾಕಷ್ಟು ಸಹಾಯ ಮಾಡಿ ಅವರನ್ನು ರಕ್ಷಿಸಿದರು.

ಇವರ ನಂತರ ಪಟ್ಟಕ್ಕೆ ಬಂದವರು ಉದಯಪುರದ ಕೊನೆಯ ಅರಸರು. ಅವರೊಂದಿಗೆ ಮೇವಾರ ರಾಜಮನೆತನದ ಮುಕ್ತಾಯ. ಮಹಾರಾಣಾ ಭೋಪಾಲಸಿಂಹರೇ ಕೊನೆಯ ಅರಸು (1930 –1947); ಅವರು ಬದುಕಿದ್ದುದು 1955ವರೆಗೆ; ಭಾರತ ಸ್ವತಂತ್ರವಾದೊಡನೆ ಯಾವ ತಕರಾರು, ತೊಂದರೆಯಿಲ್ಲದೇ ತಮ್ಮ ರಾಜ್ಯವನ್ನು ಭಾರತದೊಡನೆ ವಿಲೀನ ಮಾಡಿದರು. ಅಂತಲೇ 'ಮಹಾರಾಜ ಪ್ರಮುಖ' ಬಿರುದನ್ನು ನೀಡಿ ಅಂದಿನ ಪ್ರಧಾನ ಮಂತ್ರಿ ಪಂಡಿತ್ ಜವಾಹರಲಾಲ್ ನೆಹ್ರು ಅವರನ್ನು ಮರ್ಯಾದಿಸಿದರು.

ಈ ರೀತಿ ಮಹಾರಾಣಾ ಉದಯಸಿಂಹರಿಂದ ಪ್ರಾರಂಭವಾದ ಉದಯಪುರದ ಮೇವಾರ ರಾಜ್ಯ ಕೆಲಶತಮಾನಗಳ ಆಳ್ವಿಕೆಯಿಂದ ಕೊನೆಗೊಂಡಿತು. ಇಂದು ಈ ಭಾರತದಲ್ಲಿ ರಾಜ – ಮಹಾರಾಜರನ್ನು ನಾವು ಇತಿಹಾಸದ ಪುಟಗಳಲ್ಲಿಯೇ ಕಾಣಬೇಕು. ಆದರೆ ಅವರು ನಿರ್ಮಿಸಿದ ಸುಂದರ ಕಟ್ಟಡಗಳು, ಮಂದಿರಗಳು, ಸರೋವರಗಳು ರಮಣೀಯ ದೃಶ್ಯಗಳಾಗಿ ಉಳಿದಿವೆ. ವಾಸ್ತುಶಿಲ್ಪದಲ್ಲಿ, ಕಲೆ, ಕುಶಲತೆ, ಸಾಹಿತ್ಯ ಮುಂತಾದವುಗಳಲ್ಲಿ ಅವರು ಇಟ್ಟುಕೊಂಡ ಪ್ರೀತಿ – ಅಭಿಮಾನದ ಕುರುಹುಗಳಾಗಿ ನಿಂತಿವೆ. ಉದಯಪುರವೂ ಇದಕ್ಕೆ ಹೊರತಾಗಿಲ್ಲ.

10. ದಿಲ್‌ಖುಷ್ ಮಹಲ್‌ನ ಭಿತ್ತಿ ಚಿತ್ರಗಳಲ್ಲೊಂದು.

11. ಶೀಶ್‌ಮಹಲ್‌ನಲ್ಲಿನ ಒಂದು ಚಿತ್ರ.

10.



11.





# ಸರೋವರಗಳ ನಗರ ಉದಯಪುರ

**ದಿಲ್‌ಖುಷ್ ಮಹಲ್:** ಇದೊಂದು ಚಿತ್ರ ಶಾಲೆಯೇ ಎನ್ನಬೇಕು. ಇಲ್ಲಿನ ಸ್ಥಳೀಯ ಪದ್ಧತಿಯ ಭಿತ್ತಿಚಿತ್ರಗಳು ಪ್ರಸಿದ್ಧ. ಮೂರು ಶತಮಾನಗಳಷ್ಟು ಹಿಂದೆಯೇ ಸಿದ್ಧವಾಗಿದ್ದರೂ ಅಂದ ಮಾಸಿಲ್ಲ. ಇಂದೇ ಚಿತ್ರಿಸಿದಂತೆ ಕಾಣುತ್ತವೆ.

**ಮೋತಿಮಹಲ್:** ಇದೊಂದು ಕಾಜಿನ ತುಂಡುಗಳಿಂದ ಅಲಂಕಾರವಾದ ಭಾಗ. ಇಲ್ಲಿಯ ಆ ಬಣ್ಣದ ಕಾಜಿನ ಕುಸುರಿನ ಕೆಲಸವನ್ನು ಶಬ್ದಗಳಲ್ಲಿ ವರ್ಣಿಸಲಸಾಧ್ಯ. ನೋಡಿಯೇ ಆನಂದಿಸಬೇಕು. ಈ ಭಾಗದ ಪಕ್ಕದಲ್ಲಿಯೇ 'ಛೋಟೀ ಚಿತ್ರ ಶಾಲಾ', 'ಬಡೀ ಚಿತ್ರ ಶಾಲಾ' ಎಂಬ ಚಿತ್ರಸಂಗ್ರಹಾಲಯಗಳಿವೆ.

**ಮೋರ್‌ಚೌಕ್:** 'ಮೋರ್' ಎಂದರೆ ನವಿಲು, ನವಿಲು ರಾಜಸ್ತಾನಕ್ಕೆ ಒಂದು ಪ್ರೀತಿಯ ಪಕ್ಷಿ. ಆ ಪಕ್ಷಿಗೆ ಈ ಚೌಕಿನಲ್ಲಿ ಪ್ರಾಧಾನ್ಯ... ಸಾಧಾರಣ ಜೀವಾಕೃತಿಯ ಕೆಲ ನವಿಲುಗಳ ವಿವಿಧ ಭಂಗಿಯ ಕೃತಿಗಳಿವೆ. ಬಣ್ಣದ ಕಾಜಿನ ಚೂರುಗಳಿಂದ ಅವುಗಳ ಅಲಂಕಾರ ಬಹು ಅಂದವಾಗಿವೆ. ವಿವಿಧ ಋತುಗಳಲ್ಲಿ ನವಿಲು ಇರುವ–ತೋರುವ ಭಂಗಿಗಳೇ ಈ ಗಾಜಿನ ನವಿಲುಗಳ ವೈಶಿಷ್ಟ್ಯ. ಈ ಹಳೆಯ ಕೃತಿಗಳನ್ನು ಬಹು ಜೋಪಾನವಾಗಿ ಕಾಯುತ್ತಾರೆ. ಇವುಗಳ ಮುಂದೆ ಕಾಜಿನ ಕಪಾಟು ಮಾಡಿದ್ದಾರೆ. ನೆಟ್ಟನೋಟದಿಂದ ನೋಡುತ್ತಿದ್ದಂತೆ ಅವು ನಮ್ಮೆದುರು ಕುಣಿಯತ್ತಿವೆಯೋ ಎಂಬ ಭಾಸವಾಗುತ್ತದೆ.


**ಝನಾನಾ ಮಹಲ್:** ಇದು ರಾಣಿಯರ ವಾಸಸ್ಥಾನ. ಮೂಲ ಅರಮನೆಯ ದಕ್ಷಿಣಕ್ಕಿದೆ. 1920ರ ಸುಮಾರಿಗೆ ಮಹಾರಾಣಾ ಕರಣಸಿಂಹರಿಂದ ಕಟ್ಟಲ್ಪಟ್ಟದ್ದು. ನಂತರದ ರಾಜರು ಇದನ್ನು ಬೆಳೆಸಿದ್ದಾರೆ. ಹೊರಬದಿ ಒಂದು ಕಿಡಿಕಿಯೂ ಕಾಣುವದಿಲ್ಲವಾದರೂ ಒಳಗಡೆ ವಿಶಾಲವಾಗಿದೆ. ಬೆಳಕು, ಗಾಳಿಗಳ ಅತ್ಯಂತ ಅನುಕೂಲವಿದೆ. 1928ರವರೆಗೂ

14. ಮೋರ ಚೌಕದಲ್ಲಿ ಅರಸು ಕೂಡುವ ಮೇಲಂತಸ್ತಿನ ಮಂಟಪ.

ಜಗನಿವಾಸ – ಇಂದು ವಿಶ್ವದ 10 ಶ್ರೇಷ್ಠ ಹೋಟೆಲುಗಳಲ್ಲೊಂದೆನಿಸಿದ
15. ಲೇಕ್ ಪ್ಯಾಲೇಸ್ ಹೋಟೆಲ್.

14.







ಅದು ಸಾರ್ವಜನಿಕರಿಗೆ ತೆರೆದಿರಲಿಲ್ಲ. ಆ ವರ್ಷದಿಂದ ವಾಸ್ತು ಸಂಗ್ರಹಾಲಯವಾಗಿ ಜನತೆಗೆ ಮುಕ್ತವಾಗಿದೆ. ಹೀಗೆ ಇನ್ನೂ ಎಷ್ಟೋ ಸ್ಥಳಗಳು, ಈ ಅರಮನೆಯಲ್ಲೇ ನೋಡಬೇಕಾದ್ದೂ ಇವೆ.

ಅರಮನೆಯಲ್ಲಲ್ಲದೆ ಊರಿನ ಅನುಕೂಲವಾದ ಸ್ಥಳಗಳಲ್ಲಿ ಅಂದವಾದ ಕಟ್ಟಡಗಳೂ ಎದ್ದಿವೆ.

ಹೀಗೆ, ಸರೋವರದ ಮಧ್ಯದಲ್ಲೇ ಬೆಳೆದುದು ಇಂದು **Lake palace Hotel** ಎಂದು ಪ್ರಸಿದ್ಧವಾಗಿರುವ 'ಜಗನಿವಾಸ'. 2ನೆ ಮಹಾರಾಣಾ ಜಗತ್ ಸಿಂಹ, 1746ರಲ್ಲಿ ಈ ಸರೋವರ – ಅರಮನೆಯನ್ನು ನಿರ್ಮಿಸಿದರು. ಉದಯಪುರದಲ್ಲಿ ಇದೊಂದು ಅಪೂರ್ವ ಕಟ್ಟಡ. ದಡದಿಂದ 600 ಅಡಿ ದೂರದಲ್ಲಿ ನಡುಗುಡ್ಡೆಯ ಮೇಲಿದೆ. ಈ ಅರಮನೆ ಹಾಲುಗಲ್ಲಿನಲ್ಲಿ ನಿರ್ಮಿತವಾಗಿದೆ. ಇದು 4ಎಕರೆಯಷ್ಟು ಸ್ಥಳವನ್ನು ಆವರಿಸಿದೆ ಎಂದರೆ ಅದರ ವಿಸ್ತಾರದ ಅರಿವಾಗುವುದು. ಎರಡು ಶತಮಾನಕ್ಕೂ ಹೆಚ್ಚು ಹಿಂದೆಯೇ ಇದು ಸಿದ್ಧವಾಗಿದ್ದರೂ ಕಾಲಕಾಲಕ್ಕೆ ಯಾವುದೇ ವಿಷಯಗಳಲ್ಲೂ ವೈವಿಧ್ಯತೆ, ನಾವೀನ್ಯತೆ ತಲೆದೋರಿದಾಗ ಅವೆಲ್ಲವೂ ಇಲ್ಲಿ ಅಳವಟ್ಟಿವೆ. ಈ ಕಾರಣದಿಂದಲೇ ಇಂದಿಗೂ ನಾವೀನ್ಯಪೂರ್ಣ ಆಗಿದೆ. ಹಿಂದೊಮ್ಮೆ ರಾಜರ ತಂಪಿನ ತಾಣವಾದ ಈ ಅರಮನೆ ಇಂದು 'ಪಂಚತಾರಾ' ಹೋಟೆಲ್ (five star.) ಭಾರತದ ಪ್ರಸಿದ್ಧ ತಾಜ್ ಹೋಟೆಲ್‌ಗ್ರೂಪ್‌ನವರ ಆಡಳಿತ.

**ಜಗಮಂದಿರ :** ಸರೋವರದಲ್ಲಿಯ ಇನ್ನೊಂದು ಅರಮನೆ. 'ಜಗನಿವಾಸ'ಕ್ಕೂ ಮೊದಲೇ ನಿರ್ಮಾಣವಾಗಿದೆಯಾದರೂ 'ಲೇಕ್ ಪ್ಯಾಲೇಸ್'ಗೆ ಇರುವ ಪ್ರಸಿದ್ಧಿ ಇದಕ್ಕಿಲ್ಲ. ಆದರೆ ಐತಿಹಾಸಿಕ ಮಹತ್ವವಿದೆ. ಮೊಗಲ್ ರಾಜಕುಮಾರ 'ಖುರ್ರಮ್ (ಅನಂತರ ಬಾದಶಹಾ – ಶಹಾಜಹಾನ್)' ತನ್ನ ತಂದೆ ಜಹಾಂಗೀರನ ಮೇಲೆ ಬಂಡೆದ್ದಾಗ (revolt) ಮಹಾರಾಣಾರ ಆಶ್ರಯ ಪಡೆದು ಈ ಅರಮನೆಯಲ್ಲೇ ಬಚ್ಚಿಟ್ಟುಕೊಂಡಿದ್ದ. ಈ ಅರಮನೆಯಲ್ಲಿಯ ಇನ್ನೊಂದು ವಿಶೇಷವೆಂದರೆ, ಮುಸ್ಲಿಂ ಫಕೀರ (ಸಂತ) 'ಮದಾರ' ಎಂಬುವನ ಗೌರವಾರ್ಥ ನಿರ್ಮಿಸಿದ ಮಸೀದಿ.

ಈ ಅರಮನೆಯನ್ನು 1615ನಲ್ಲಿ ಕಟ್ಟಲು ಪ್ರಾರಂಭಿಸಿದವರು ಮಹಾರಾಣಾ ಅಮರಸಿಂಹ. 1622ರಲ್ಲಿ ಕರಣಸಿಂಹರಿಂದ ಪೂರ್ಣವಾಯಿತು. ನಂತರ ಅವರ ಮಗ ಮಹಾರಾಣಾ ಜಗತಸಿಂಹರಿಂದ ಈ ಅರಮನೆಯ ಕೆಲಭಾಗ ಕಟ್ಟಲ್ಪಟ್ಟಿತು. ಅದಷ್ಟೇ ಕಾರಣದಿಂದ ಅವರು ತಮ್ಮ ಹೆಸರನ್ನೇ ಈ ಅರಮನೆಗೆ ಘೋಷಿಸಿದರು. ಅದೇ 'ಜಗ ಮಂದಿರ' ವಾಯಿತು.

ಇದೇರೀತಿಯಾಗಿ ಕಾಲಕಾಲಕಾಲಕ್ಕೆ ಕೆಲ ಹೊಸ ಸರೋವರಗಳು ಉದಯಪುರ ಊರಲ್ಲಿಯೂ, ಹೊರಗೂ ತಲೆದೋರಿವೆ. ಇದ್ದ ಸರೋವರಗಳ ಭದ್ರತೆಯನ್ನು ಕಾಯ್ದುಕೊಂಡು ಬರಲಾಗಿದೆ.

ಇಂದು ಉದಯಪುರ ವಿಶಾಲವಾಗಿ ಬೆಳೆಯುತ್ತಿದೆ. ಒಂದು ಔದ್ಯೋಗಿಕ ಕೇಂದ್ರವಾಗುತ್ತಿದೆ. ಹೊಸ ರೀತಿಯ ಕಟ್ಟಡಗಳು ಬರುತ್ತಿವೆ. ಆದರೆ ಹಿಂದೆ ರಾಜರು ನಿರ್ಮಿಸಿದ ಕಟ್ಟಡಗಳ ಮಂದಿರದ ಭವ್ಯತೆಗೆ ಸಮಾನವಾಗಿ ಇಂದಿನ ಯಾವ ಕಟ್ಟಡಗಳೂ ನಿಲ್ಲಲಾರವು. ಅಂದು ನಿರ್ಮಾಣವಾದ 'ಜಗನಿವಾಸ' ಇಂದಿನ 'ಲೇಕ್ ಪ್ಯಾಲೇಸ್ ಹೋಟೇಲು' ವಿಶ್ವದಲ್ಲಿಯ ಅತ್ಯಂತ ಉತ್ಕೃಷ್ಟವಾದ ಹತ್ತು ಹೋಟೇಲ್‌ಗಳಲ್ಲಿ ಒಂದಾಗಿವೆಯೆಂಬುದು ಅಭಿಮಾನದ ಸಂಗತಿಯಲ್ಲವೆ? ●

# ಚಿತ್ತೋರ ಮತ್ತು ಉದಯಪುರ.

ಉದಯಪುರದ ವಿಷಯ ಬರೆಯುವಾಗ ಚಿತ್ತೋರ ಹೆಸರನ್ನೂ ಎತ್ತಲೇಬೇಕು. ಚಿತ್ತೋರ ವೈರಿಗಳ ಕಾಟದಲ್ಲಿ ಸಿಕ್ಕಾಗಿಂದಲೇ ಹೊಸ ರಾಜಧಾನಿಯ ಹೊಳವು ಈ ರಾಜಮನೆತನಕ್ಕೆ ಬಂದುದು.

ಕ್ರಿ.ಶ. 1533ರಲ್ಲಿ ಗುಜರಾತದ ಸುಲ್ತಾನ ಬಹದ್ದೂರ ಶಹಾ ಚಿತ್ತೋರ ಮೇಲೇರಿಬಂದ. ಆಗ ಆಳುತ್ತಿದ್ದವರು ವಿಕ್ರಮ್ ಜೀತರು. ಅವರು ಅಂತಹ ಶೂರತನದಿಂದ ವೈರಿಯನ್ನೆದುರಿಸಲಿಲ್ಲ. ಯುದ್ಧದಲ್ಲಿ ಸೋಲೇ ನಿಶ್ಚಿತವೆಂದು ಕಂಡುಬಂದಾಗ, ರಾಜಮಾತೆ – ರಾಣಿ ಜವಾಹರಬಾಯಿ ಸ್ವತಃ ಮೂವತ್ತೆರಡು ಸಾವಿರ ರಜಪೂತ ಸೈನ್ಯದೊಂದಿಗೆ ವೈರಿಯನ್ನೆದುರಿಸಲು ಕೋಟೆಯಿಂದ ಹೊರಟಳು.

ಇತ್ತ ರಾಣಿ–ಕರ್ಣಾವತಿ ಹದಿಮೂರು ಸಾವಿರ ಮಹಿಳೆ, ಮಕ್ಕಳ ಸಹಿತ ಅಗ್ನಿಪ್ರವೇಶ. ಚಿತ್ತೋರ ಇತಿಹಾಸದಲ್ಲಿ ಎರಡನೆಯ 'ಜೋಹರ' ನಡೆಯುತ್ತದೆ.

ರಾಣಿ ಕರ್ಣಾವತಿ 'ಜೋಹರ'ಗೆ ಮೊದಲು ತನ್ನ ಮಗು ರಾಜಕುಮಾರ ಉದಯಸಿಂಹನನ್ನು, ತನ್ನೊಬ್ಬ ನಂಬಿಗೆಯ ದಾಸಿಯೊಂದಿಗೆ, ತನ್ನ ತವರು ಬುಂದಿಯ ಕುಂಬಾಲಗಢ ಕಿಲ್ಲೆಗೆ ಕಳಿಸುತ್ತಾಳೆ. ಅಲ್ಲಿ ಬೆಳೆದ ಉದಯಸಿಂಹ 1[illegible] ವರ್ಷದವನಾದಾಗ ಚಿತ್ತೋರ ಪಟ್ಟಣ ಸೇರುತ್ತಾನೆ. ಉದಯಸಿಂಹರಿಗೆ ತಮ್ಮ ವಂಶಜರ ಶೂರತ್ವದ ಪೂರ್ಣ ಅರಿವಿರುತ್ತದೆ. ಮೊಗಲರಿಗೆ ಚಿತ್ತೋರಿನ ಮೇಲಿನ ದಾಹ ಕಡಿಮೆಯಾಗಿರುವುದಿಲ್ಲ. 1567ರಲ್ಲಿ ಸ್ವತಃ ಅಕಬರನೇ ದಂಡೆತ್ತಿ ಬರುತ್ತಾನೆ. ಉದಯಸಿಂಹರು, ತಮ್ಮ ಸೈನ್ಯಾಧಿಕಾರಿಗಳ ಸಲಹೆಮೇರೆ ಚಿತ್ತೋರನ್ನು ಬಿಡುತ್ತಾರೆ. ಅಕಬರನನ್ನು ಎದುರಿಸಲು ಉದಯಸಿಂಹ ತಮ್ಮಂದಿರಾದ ಕೇವಲ ಹದಿವಯದ ಜಯಮಾಲಾ ಹಾಗೂ ಪಟ್ಟ ರಾಜಕುಮಾರರನ್ನು ಬಿಡುತ್ತಾರೆ. ಎಷ್ಟೇ ಶೂರತನದಿಂದ ಕಾದಾಡಿದರೂ ಚಿತ್ತೋರು ಅಕಬರನ ವಶವಾಗುತ್ತದೆ. ಅದರೆ ಅವನಿಗೆ ಸಿಕ್ಕಿದ್ದು ಶವತುಂಬಿದ ನಗರ ಮಾತ್ರ. ಸೋಲು ನಿಶ್ಚಿತವೆಂದಾದಾಗ, ಅದೇ ಮದುವೆಯಾದ ರಾಣಿಯರು ಇನ್ನೂ ಹಸಿಮೈ ಆರದವರು ಅಗ್ನಿಪ್ರವೇಶ ಮಾಡುತ್ತಾರೆ. ಹೀಗೆ ಚಿತ್ತೋರಿನಲ್ಲಿ ಮೂರನೆಯ ಸಲ 'ಜೋಹರ್' ನಡೆಯುತ್ತದೆ.

ಈರೀತಿಯಾಗಿ ಚಿತ್ತೋರ ರಜಪುತ ಅರಸರ ಕೈಬಿಡುತ್ತದೆ. ಇತ್ತ ಉದಯಸಿಂಗರು ಆಗಲೇ ನಿರ್ಧರಿಸಿದ ಮೇರೆಗೆ ರಾಜಧಾನಿಯನ್ನು ಸ್ಥಳಾಂತರಿಸುವ ವಿಚಾರ ಮಾಡುತ್ತಾರೆ. ಉದಯಪುರ ಹುಟ್ಟುತ್ತದೆ.

ಆದರೆ ಈ ರಾಜಮನೆತನಕ್ಕೆ ಚಿತ್ತೋರಿನ ಮೇಲಿನ ಮೋಹ ಕಡಿಮೆಯಾಗುವುದಿಲ್ಲ. ಮುಂದೆ, ಮಹಾರಾಣಾ ಪ್ರತಾಪರು ಚಿತ್ತೋರನ್ನು ಮರಳಿ ಪಡೆಯಬೇಕೆಂದು ಪ್ರಯತ್ನಿಸುತ್ತಾರೆ. ಅದು ತಮ್ಮ ಕೈವಶವಾಗುವರೆಗೂ ತಾವು ಬೆಳ್ಳಿ, ಬಂಗಾರದ ಪಾತ್ರೆಗಳಲ್ಲಿ ಉಣ್ಣುವುದಿಲ್ಲವೆಂದೂ, ಗಾದಿಯ ಮೇಲೆ ಮಲಗುವದಿಲ್ಲವೆಂದೂ, ಅರ್ಥಾತ್ ಯಾವ ರಾಜಭೋಗವನ್ನೂ ಅನುಭವಿಸುವದಿಲ್ಲವೆಂದೂ ಪಣತೊಡುತ್ತಾರೆ. ಅದನ್ನು ಜೀವಮಾನವಿಡೀ ಪಾಲಿಸುತ್ತಾರೆ. ಉದಯಪುರ 'ಮಹಾರಾಣಾ 'ರಾಜಮನೆತನದಲ್ಲಿ ರಾಣಾ ಪ್ರತಾಪರ ಹೆಸರು ಸದಾಹಸಿರು.



16.

16. ಮೋತಿಮಗರಿ ಗುಡ್ಡದ ಮೇಲಿನ ಮಹಾ ರಾಣಾ ಪ್ರತಾಪ ಲೋಹಶಿಲ್ಪ.